

# ಕಾನನದ ನಡುವೆ ಕಣ್ಸೆಳೆವ ಒಣಚಲು ಜಲಧಾರೆ

**ಮೊದಲ ನೋಟಕ್ಕೆ ಅಬ್ಬಿ ಫಾಲ್ಸ್‌ನಂತೆಯೇ ಕಾಣುತ್ತದೆ. ಇದೊಂದು ಖಾಸಗಿ ಜಲಪಾತ.**

ಚಿತ್ರ– ಲೇಖನ: **ಯಜಾಸ್ ದುದ್ದಿಯಂಡ**

**ಕೊ**ಡಗು ಎಂದ ಕೂಡಲೇ ನೆನಪಾಗುವುದು ಹಚ್ಚ ಹಸಿರಿನ ವನರಾಶಿ. ಭೂಮಿಗೆ ಮುತ್ತಿಡುತ್ತಿರುವ ಮಂಜು, ಸದಾ ನೀರಿನಿಂದ ಭೋರ್ಗರೆಯುವ ಜಲಪಾತಗಳು. ಕೊಡಗಿನ ಜಲಪಾತ ಎಂದೊಡನೆ ನೆನಪಾಗುವುದು ಮಡಿಕೇರಿಯ ಅಬ್ಬಿ ಫಾಲ್ಸ್ ಮತ್ತು ಸೋಮವಾರಪೇಟೆಯ ಮಲ್ಲಳ್ಳಿ. ಆದರೆ, ಇದನ್ನು ಹೊರತು ಪಡಿಸಿ ದಟ್ಟಾರಣ್ಯದ ಮಧ್ಯೆಯಲ್ಲೊಂದು ಜಲಪಾತವಿದೆ. ಇದನ್ನು ಒಣಚಲು ಜಲಪಾತ ಎನ್ನುತ್ತಾರೆ. ಆದರೆ ಮೂಲ ಸೌಕರ್ಯ ಹಾಗೂ ಪ್ರವಾಸಿಗರಿಗೆ ಮಾಹಿತಿ ಇಲ್ಲದ ಕಾರಣ ಇದು ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಒಣಚಲುವಿನಲ್ಲಿ ಈ ನಯನ ಮನೋಹರ ಜಲಪಾತ ಇದೆ. ಮಡಿಕೇರಿಯಿಂದ ಗಾಳಿಬೀಡುವಿಗೆ 8 ಕಿ.ಮೀ. ಅಲ್ಲಿಂದ ಒಣಚಲುವಿಗೆ ಸುಮಾರು 12 ಕಿ.ಮೀ. ದೂರವಿದೆ. ಒಣಚಲು ಗ್ರಾಮದಿಂದ 2 ಕೀ.ಮೀ.ನಷ್ಟು ದೂರದ ಮಣ್ಣಿನ ರಸ್ತೆಯಲ್ಲಿ ಸಂಚರಿಸಿದರೆ ಒಣಚಲು ಜಲಪಾತ ಸಿಗುತ್ತದೆ. ಜೀಪ್‌ನಂತಹ ಲಘು ವಾಹನಗಳಲ್ಲಿ ಮಾತ್ರ ಈ ಜಲಪಾತಕ್ಕೆ ತೆರಳಬಹುದು. ತೋಟದ ನಡುವೆ ಹೆಜ್ಜೆ ಹಾಕುತ್ತಾ ಮುನ್ನಡೆಯುತ್ತಿದ್ದರೆ ದಾರಿ ಸಾಗುವುದೇ ಗೊತ್ತಾಗುವುದಿಲ್ಲ. ಇನ್ನೇನು ಕೆಲವೇ ಕಿ.ಮೀ.

(8ನೇ ಪುಟ ನೋಡಿ)